ಅ) ಕರ್ನಾಟಕ ಅಬಕಾರಿ (ಅಬಕಾರಿ ಕರ ಮತ್ತು ಶುಲ್ಕ) ನಿಯಮಗಳು 1968ರ ತಿದ್ದುಪಡಿ ಸಂಬಂಧದಲ್ಲಿ ದಿನಾಂಕ 18.1.1995ರಂದು ಹೊರಡಿಸಲಾದ ಎಫ್ಡಿ 15 ಪಿ.ಇ.ಎಸ್.94(1)ನೇ ಕ್ರಮಾಂಕದ ಅಧಿಸೂಚನೆ;

ಆ) ಅಧಿಸೂಚನೆ ಸಂಖ್ಯೆ ಎಫ್ಡಿ 15 ಪಿಇಎಸ್ 94(1), ದಿನಾಂಕ 18.1.1995ಕ್ಕೆ ಸಂಬಂಧಿಸಿದಂತೆ ದಿನಾಂಕ 2.3.1995 ರಂದು ಹೊರಡಿಸಲಾದ ಎಫ್ಡಿ 15 ಪಿಇಎಸ್ 94ನೇ ಕ್ರಮಾಂಕದ ತಿದ್ದೋಲೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಎಲ್ಲಾ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

11.10 ಪಿ.ಎಂ.

ಅರ್ಜಿಯನ್ನೊಪ್ಪಿಸುವುದು

ಶ್ರೀ ಸಿ.ಎಂ. ಉದಾಸಿ : ಧಾರವಾಡ ಜಿಲ್ಲೆ, ಹಿರೇಕೆರೂರು ತಾಲ್ಲೂಕು ಹಳ್ಳೂರಿನಲ್ಲಿರುವ ಶ್ರೀ ರಂಗನಾಥ ಸ್ವಾಮಿ ಅನುದಾನಿತ ಪ್ರೌಢಶಾಲೆಗೆ ಅನುಮೋದನೆಯಾಗಿರುವ ಹೆಚ್ಚುವರಿ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ ಮಿತವ್ಯಯವನ್ನು ಸಡಿಲಿಸಿ ವೇತನ ಬಿಡುಗಡೆ ಮಾಡುವುದಕ್ಕೆ ಸಂಬಂಧಿಸಿದ ಅರ್ಜಿಯನ್ನು ಸದನಕ್ಕೆ ಒಪ್ಪಿಸಬಯಸುತ್ತೇನೆ.

ಅಧ್ಯಕ್ಷರು : ಅರ್ಜಿಯನ್ನು ಒಪ್ಪಿಸಲಾಯಿತು. ಗಮನ ಸೆಳೆಯುವ ಸೂಚನೆಗೆ ಹೋಗುವ ಮೊದಲು ಶಾಸಕರಾದ ಶ್ರೀ ಮಾರುತಿರಾವ್ ಪವಾರ್, ಶ್ರೀ ಶಂಕರಲಿಂಗೇಗೌಡ, ಶ್ರೀ ರಾಮದಾಸ್, ಶ್ರೀ ವಿಜಯಶಂಕರ್ ಅವರು ರೂಲ್191ರ ಕೆಳಗೆ ಒಂದು ಸೂಚನೆಯನ್ನು ಕಳುಹಿಸಿ ಅದರಲ್ಲಿ ತಮ್ಮ ಹಕ್ಕಿಗೆ ಚ್ಯುತಿ ಬಂದಿದೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಸ್ವಲ್ಪ ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದರೆ ನಾನು ಆಮೇಲೆ ತೀರ್ಮಾನ ತೆಗೆದುಕೊಳ್ಳುತ್ತೇನೆ. ಮೊದಲಿಗೆ ಶ್ರೀ ಮಾರುತಿರಾವ್ ಪವಾರ್ ಅವರು,

ಹಕ್ಕುಚ್ಯುತಿ ನಿರ್ಣಯದ ಬಗ್ಗೆ ಪ್ರಸ್ತಾವನೆ

ಶಾಸಕರಿಗೆ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿಗಳಿಂದ ಹಕ್ಕುಚ್ಯುತಿಯಾಗರುವ ಬಗ್ಗೆ

ಶ್ರೀ ಮಾರುತಿರಾವ್ ಪವಾರ್ (ನರಸಿಂಹರಾಜ) : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಶಾಸಕರಿಗೆ ಹಕ್ಕುಚ್ಯುತಿ ಆಗಿದೆ ಎನ್ನತಕ್ಕ ಹಿನ್ನಲೆಯಲ್ಲಿ ನಿಯಮ 191ರ ಪ್ರಕಾರ ನಮಗೆ ಆಗಿರತಕ್ಕ ಹಕ್ಕುಚ್ಯುತಿಯನ್ನು ಮಂಡನೆ ಮಾಡಲಿಕ್ಕೆ ತಮ್ಮ ಅನುಮತಿ ಕೇಳುತ್ತಿದ್ದೇನೆ. ಕರ್ನಾಟಕ ಗೃಹ ಮಂಡಲಿಯಲ್ಲಿ 1967ರಲ್ಲಿ ಕೆಲಸಕ್ಕೆ ಸೇರಿದ. ಶ್ರೀ ಕೆ. ಸಿದ್ದಪ್ಪ ಎಂಬುವವರು ಅಲ್ಲಿ ಕೆಲಸ ಮಾಡುತ್ತಿದ್ದರು. 17-8-1984ರಂದು ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಮರಣ· ಹೊಂದಿದ್ದು ಆತನಿಗೆ ದೊರಕಬೇಕಾದ ಮರಣೋತ್ತರ ಸೇವಾ ಸೌಲಭ್ಯಗಳನ್ನು ಇಲ್ಲಿಯತನಕ ನೀಡದೆ ಇರುವ ಹಿನ್ನಲೆಯಲ್ಲಿ ಅವರ ಪತ್ನಿ ಶ್ರೀಮತಿ ಸುಬ್ಬಮ್ಮನವರು ಹತ್ತು ವರ್ಷಗಳ ಕಾಲ ತನ್ನ ಪತಿ ಶ್ರೀ ಕೆ. ಸಿದ್ದಪ್ಪನವರ ಮರಣೋತ್ತರ ಸೇವಾ ಸೌಲಭ್ಯಗಳನ್ನು ಪಡೆಯುವುದಕ್ಕೋಸ್ಕರ ತನ್ನ ಎಲ್ಲಾ ಪ್ರಯತ್ನ ಮಾಡಿ ಸಾಕಾಗಿ ಕೊನೆಗೆ ನಾನು ಶಾಸತನಾದ ನಂತರ ಎಲ್ಲಾ ದಾಖಲೆಗಳನ್ನು ನನ್ನ ಕೈಗೆ ಕೊಟ್ಟರು. ಈ ದಾಖಲೆಗಳನ್ನು ತೆಗೆದುಕೊಂಡು ಹೋಗಿ ನಾನು ಕರ್ನಾಟಕ ಗೃಹ ಮಂಡಲಿಗೆ ಕಾವೇರಿ ಭವನದಲ್ಲಿರತಕ್ಕ ಕಛೇರಿಗೆ ಹೋಗಿ ಅಧಿಕಾರಿಣಿ ಒಬ್ಬರನ್ನು ಭೇಟಿ ಮಾಡಿ ಈ ಕಡತದ ಬಗ್ಗೆ ಏನಾಗಿದೆ ಎಂದು

ಪ್ರಶ್ನೆ ಕೇಳಿ, ಅದಕ್ಕೆ ಉತ್ತರ ಕೇಳಿದಾಗ ಕರ್ನಾಟಕ ಗೃಹ ಮಂಡಲಿಯವರು ನನಗೆ ಒಂದು ಉತ್ತರ ಕೊಟ್ಟಿದ್ದಾರೆ. ನಾನು ಆ ಉತ್ತರವನ್ನು ಓದುತ್ತಿದ್ದೇನೆ.

ಅಧ್ಯಕ್ಷರು : ಅದೆಲ್ಲ ಬೇಡ. ನಿಮ್ಮ ಹಕ್ಕಿಗೆ ಎಲ್ಲಿ ಚ್ಯುತಿ ಬಂತು, ಯಾರು ಚ್ಯುತಿ ತಂದರು, ಯಾವಾಗ ತಂದರು ಎಂಬುದನ್ನು ಸೂಕ್ಷ್ಮವಾಗಿ ಹೇಳಿ.

+ಶ್ರೀ ಮಾರುತಿರಾವ್ ಪವಾರ್ : ದಿ॥ ಕೆ. ಸಿದ್ದಪ್ಪನವರ ಒಂದು ಮರಣೋತ್ತರ ಸೇವಾ ಸೌಲಭ್ಯಗಳನ್ನು ನೀಡಬೇಕೆಂಬ ಹಿನ್ನಲೆಯಲ್ಲಿ ನಿನ್ನೆಯ ದಿನ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿ ಆಗಿರತಕ್ಕ ಕು। ಮಂಜುಳಾ ಅವರನ್ನು ಭೇಟಿ ಮಾಡಿದೆ ಮತ್ತು ಅವರಿಗೆ ಕಳೆದ 27-2-95ರಂದು ಇದೇ ವಿಚಾರದಲ್ಲಿ ಪತ್ರ ಬರೆದಿದ್ದು ಈ ಒಂದು ಕಡತದ ಬಗ್ಗೆ ಏನು ಮಾಡಿದ್ದೀರಿ ಎಂಬ ಮನವಿ ಮಾಡಿದ್ದೆ. ಕಳೆದ 15 ದಿನಗಳ ಹಿಂದೆ ಅವರನ್ನು ಭೇಟಿ ಮಾಡಿ ಇದರ ವಿವರಣೆ ಕೇಳಿದಾಗ ಅವರು ನಾನು ಎರಡು ದಿನಗಳಲ್ಲಿ ಇದನ್ನು ಕಳುಹಿಸಿಕೊಡುತ್ತಾನೆಂಬ ಮಾತನ್ನು ಹೇಳಿದರು. ನಂತರ ಇವತ್ತು ನಾನು ಮತ್ತೆ ಸದನ ಮುಗಿಸಿಕೊಂಡು ಮೈಸೂರಿಗೆ ಹೋಗಬೇಕಾದ ಸಂದರ್ಭದಲ್ಲಿ ಈ ವಿಚಾರದ ಬಗ್ಗೆ ಏನಾಗಿದೆ ಎಂದು ತಿಳಿದುಕೊಂಡು ಹೋಗೋಣ ಎಂದು ಭೇಟಿ ಮಾಡಿದಾಗ ಅವರು ಪ್ರಾರಂಭದಲ್ಲೇ, ಏನಾಗಿದೆ ಎಂದು ವಿಚಾರ ಕೇಳಬೇಕೆಂದಾಗ ಸಿಡಿಮಿಡಿಗೊಂಡು, ಇಲ್ಲ ಇದರ ಬಗ್ಗೆ ನನಗೆ ಪುಸೊತ್ತು ಇಲ್ಲ, ನನಗೆ ಪುರಸತ್ತು ಇದ್ದಾಗ ಮಾಡುತ್ತೇನೆ; ಇದರ ಬಗ್ಗೆ ನೀವು ಕಛೇರಿಗೆ ಬರುವಂಥ ಅವಶ್ಯಕತೆ ಇಲ್ಲ್ ಎಂದು ಇಂಗ್ಲೀಷ್ನಲ್ಲಿ ಕನ್ನಡದಲ್ಲಿ ಎರಡರಲ್ಲೂ ನನಗೆ ಉತ್ತರ ಕೊಟ್ಟರು. ಆಗ ಜೊತೆಯಲ್ಲಿ ಬಂದ ಶಾಸಕರಾದ ಶ್ರೀ ವಿಜಯಶಂಕರ್ ಅವರು ಮಧ್ಯೆ ಪ್ರವೇಶಿಸಿ ಈ ರೀತಿ ನೀವು ಉತ್ತರ ಕೊಡಬಾರದು. ಶಾಸಕರು ಬಂದಂತಹ ಸಂದರ್ಭದಲ್ಲಿ ತಾವು ಜವಾಬ್ದಾರಿಯಿಂದ ಉತ್ತರ ಕೊಡಬೇಕಾಗುತ್ತದೆ. ಹೀಗೆ ನನಗೆ ಪುರಸತ್ತು ಇಲ್ಲ, ನನಗಗೆ ಇಷ್ಟ ಬಂದಾಗ ಮಾಡುತ್ತೇನೆಂಬ ಉತ್ತರ ಕೊಡಬಾರಾದೆಂಬ ಮಾತನ್ನು ಹೇಳಿದರು. ಆಗ ಶ್ರೀ ವಿಜಯಶಂಕರ್ ಅವರಿಗೂ ಸಹ, ಈ ಸಂಧರ್ಭದಲ್ಲಿ ಮಧ್ಯದಲ್ಲಿ ಬಾಯಿ ಹಾಕುವ ಅವಶ್ಯಕತೆ ಇಲ್ಲವೆಂಬ ಉತ್ತರ ಕೊಟ್ಟರು. ಕಛೇರಿಗೆ ಬರಬೇಡಿ ಹೊರಗೆ ಹೋಗಿ ಎಂಬ ಮಾತನ್ನು ಹೇಳಿದರು. ಆಗ ಶ್ರೀ ವಿಜಯಶಂಕರ್ ಅವರು ನನಗೆ ಎಲ್ಲಿ ಪ್ರಶ್ನೆ ಕೇಳಬೇಕೆಂಬ ವಿಚಾರ ಗೊತ್ತಿದೆ. ನಾವು ಅಲ್ಲೇ ಕರೆಯಿಸಿ ವಿಚಾರಣೆ ಮಾಡುತ್ತೇವೆಂಬ ಮಾತು ಹೇಳಿ ಆಚೆ ಹೋದರು. ಆದರೂ ಸಹ ನಾನು ಸಮಾಧಾನದಿಂದ ಅಲ್ಲೇ ಕುಲಿತು ಹೀಗೆ ತಾವು ಮಾಡಬಾರದು. ಒಬ್ಬ ಬಡ ಕುಟುಂಬದ ವಿಚಾರ ಇದೆ. ನಾನು 1994ರಲ್ಲಿ ಕರ್ನಾಟಕ ಗೃಹ ಮಂಡಲಿಯಿಂದ ಉತ್ತರ ಕೇಳಿದರೂ ಇದರ ಬಗ್ಗೆ ಉತ್ತರ ಕೊಟ್ಟಿಲ್ಲ. ತಕ್ಷಣ ಕಡಿತ ವಿಲೇವಾರಿ ಮಾಡಬೇಕೆಂಬ ಮನವಿ ಮಾಡಿದಾಗ ನಾನು ನಿಮಗೆ ಇಂಗ್ಲೀಷ್ನಲ್ಲಿ ಉತ್ತರ ಕೊಟ್ಟಿ, ಉತ್ತರ ಅರ್ಥವಾಗಲಿಲ್ಲವೆಂದು ಕಾಣುತ್ತದೆ. ನಾನು ನಿಮಗೆ ಕಛೇರಿಯಿಂದ ಹೋಗಿ ಎಂದು ಹೇಳಬೇಕೇ ಎಂಬ ಮಾತು ಹೇಳಿದರು. ನನಗೆ ಕನ್ನಡದಲ್ಲಿ ಹೇಳಿ ನಿಮ್ಮ ಇಂಗ್ಲೀಷ್ ಅರ್ಥವಾಗಲಿಲ್ಲ ಎಂದು ಹೇಳಿದೆ. ಕರ್ನಾಟಕ ಇದೆ, ಕನ್ನಡದಲ್ಲಿ ಉತ್ತರ ಕೊಟ್ಟರೆ ಅರ್ಥವಾಗುತ್ತದೆಂಬ ಮಾತನ್ನು ನಾನು ಹೇಳಿದೆ. ನಾನು ಭಾರತದಲ್ಲಿದ್ದೇನೆ. ಇಂಗ್ಲೀಷ್ನಲ್ಲಾದರೂ ಕೊಡುತ್ತೇನೆ, ಯಾವ ಭಾಷೆಯಲ್ಲಾದರೂ ಕೊಡುತ್ತೇನೆ, ನೀವು ಕೇಳುವುದಕ್ಕೆ ಹಕ್ಕಿಲ್ಲ ಎಂಬ ಮಾತನ್ನು ಪ್ರತಿಪಾದನೆ ಮಾಡಿದರು. ಇದರಿಂದ ಶಾಸಕರಿಗೆ ಹಕ್ಕುಚ್ಯುತಿ ಆಗಿದೆ. ನಾವು ಕಛೇರಿಗೆ ಜನ ಸಾಮಾನ್ಯರ ಸಮಸ್ಯೆಗಳನ್ನು ತೆಗೆದುಕೊಂಡು ಕೆಲಸಗಳು ಆಗಬಹುದೆಂದು ಹೋಗತಕ್ಕದ್ದು ನಮ್ಮ ಜವಾಬ್ದಾರಿ ಮತ್ತು ಕರ್ತವ್ಯವಾಗಿದೆ. ಇಂಥ ಸಂದರ್ಭದಲ್ಲಿ ಐಎಎಸ್ ಅಧಿಕಾರಿಗಳಾಗಿರತಕ್ಕವರು ಕೆಲವರು ನಮ್ಮದೇ ಸರ್ಕಾರ ಎಂಬ ರೀತಿಯಲ್ಲಿ ಮಾತನಾಡುತ್ತಾರೆ.

+ ಶ್ರೀ ಬಿ.ಹೆಚ್. ವಿಜಯಶಂಕರ್ (ಹುಣಸೂರು) : ಮಾನ್ಯ ಅಧ್ಯಕ್ಷರೇ, ನೂತನವಾಗಿ ಆಯ್ಕೆಯಾದ ಶಾಸಕರು ನಾವು ಏನಿದ್ದೇವೆ ನಾವು ಈ ಸದನದ ಬಗ್ಗೆ ಅಪಾರವಾದ ಗೌರವ ಹೊಂದಿದ್ದೇವೆ. ಸಾರ್ವಜನಿಕರಿಗೆ ನಮ್ಮ ಸೇವಾವಧಿಯಲ್ಲಿ ಜನರು ಏನು ಅವಕಾಶ ಕೊಟ್ಟಿದ್ದಾರೆ ಇದನ್ನು ಸದುಪಯೋಗ ಮಾಡಿಕೊಂಡು ಸಾಧ್ಯವಾಗುವ ಎಲ್ಲಾ ಸೇವೆಯನ್ನು ಸಮಾಜಕ್ಕೆ ಕೊಡಬೇಕೆಂಬ ಭಾವನೆಯನ್ನು ಇಟ್ಟುಕೊಂಡಿದ್ದೇವೆ. ಆ ಭಾವನೆಯಿಂದ ನಾವು ಮತ್ತು ನಮ್ಮ ಸಹೋದ್ಯೋಗಿಗಳಾದ ಶ್ರೀ ಮಾರುತಿರಾವ್ ಪವಾರ್ ಅವರು 4ನೇ ದರ್ಜೆ ನೌಕರರಾಗಿ ಗೃಹ ಮಂಡಲಿಯಲ್ಲಿ ಕೆಲಸ ಮಾಡಿ 1985ರಲ್ಲಿ ನಿಧನ ಹೊಂದಿದ ಶ್ರೀ ಕೆ. ಸಿದ್ದಪ್ಪ ಎಂಬ ವ್ಯಕ್ತಿ ಏನಿದ್ದರು, ಅವರ ಸಂಸಾರಕ್ಕೆ ಕಳೆದ ಹತ್ತು ವರ್ಷಗಳಿಂದ ಏನು ಸೇವಾ ಸೌಲಭ್ಯ ಏನು ಸಿಗಬೇಕಾಗಿತ್ತು ಅದು ಸಿಕ್ಕಿಲ್ಲದೇ ಇರುವುದರಿಂದ ಅವರಿಗೆ ಅಧನ್ನು ದೊರಕಿಸಿ ಕೊಡಲು ಪ್ರಯತ್ನಪಟ್ಟರು. ಅವರು ವಿಧವಾ ಮಹಿಳೆ, ಅವರಿಗೆ 4 ಜನ ಹೆಣ್ಣು ಮಕ್ಕಳಿದ್ದಾರೆ. ಅವರಿಗೆ ಇಲ್ಲಿಯವರೆಗೆ ಸಿಗಬೇಕಾದ ಸೇವಾ ಸೌಲಭ್ಯ ಸಿಗಲಿಲ್ಲವೆಂಬ ಮಾತನ್ನು ಶ್ರೀ ಮಾರುತಿರಾವ್ ಪವಾರ್ ಅವರು ಹೇಳಿದಾಗ ಅದರ ಬಗ್ಗೆ ಮಾಹಿತಿ ಪಡೆದು ಅಧಿಕಾರಿಗಳಿಗೆ ತಿಳಿವಳಿಕೆ ಕೊಟ್ಟು ಆದಷ್ಟು ಬೇಗ ಸಿಗಬೇಕಾದ ಸೌಲಭ್ಯಗಳ ಬಗ್ಗೆ ಅಧಿಕಾರಿಗಳಿಗೆ ತಿಳುವಳಿಕೆ ಕೊಡೋಣ ಎಂಬ ವಿಚಾರದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಹೋದಾಗ ಕನಿಷ್ಟ ಸೌಜನ್ಯ ಕೂಡ ತೋರಿಸಲಿಲ್ಲ. ನಮಗೆ ಕುಳಿತುಕೊಳ್ಳಿ ಎಂಬ ಮಾತನ್ನು ಸಹ ಹೇಳಲಿಲ್ಲ. ಇನ್ನೊಬ್ಬ ಬೇರೆ ಅಧಿಕಾರಿಗಳು ಎದ್ದು ಕೆಲವು ನಿಮಿಷಗಳ ನಂತರ ಶ್ರೀ ವಿಜಯಶಂಕರ್ ಅವರಿಗೆ ಕುಳಿತುಕೊಳ್ಳಿ ಎಂಬ ಮಾತನ್ನು ಹೇಳಿದರು.

ನಂತರ ಶ್ರೀ ಮಾರುತಿರಾವ್ ಪವಾರ್ ಅವರು ಮಾಹಿತಿ ಕೇಳಿದ ಸಮಯದಲ್ಲಿ ನೀವು ಕೇಳಬೇಕಾದ ಅಗತ್ಯ ಇಲ್ಲ, ನಾನು ನಿಮಗೆ ಹೇಳಬೇಕಾದ ಅಗತ್ಯ ಇಲ್ಲ, ನಾವು ಲಿಖಿತ ಉತ್ತರ ಕಳುಹಿಸುತ್ತೇವೆ. ನಮ್ಮ ಕಛೇರಿಗೆ ಬರತಕ್ಕ ಅಗತ್ಯ ಏನಿದೆ? ನಾನು ಕನ್ನಡದಲ್ಲಿ ಮಾತನಾಡಬೇಕೆಂದು ಕಾನೂನು ಏನಿದೆ? ಈ ರೀತಿಯಾಗಿ ಎಲ್ಲಾ ಪ್ರಶ್ನೆಗಳನ್ನು ಒಂದರ ಮೇಲೆ ಒಂದು ಹಾಕತಕ್ಕ ವರ್ತನೆ ಕಂಡಾಗ ನಾನು ಮಧ್ಯದಲ್ಲಿ ಪ್ರವೇಶಿಸಿ, ಇಲ್ಲ, ನೀವು ಒಬ್ಬ ಅಧಿಕಾರಿಯಾಗಿದ್ದು ಉನ್ನತ ಸ್ಥಾನದಲ್ಲಿ ಇದ್ದು ಈ ರೀತಿ ಪ್ರವೇಶಿಸಿ, ಇಲ್ಲ, ನೀವು ಒಬ್ಬ ಅಧಿಕಾರಿಯಾಗಿದ್ದು ಉನ್ನತ ಸ್ಥಾನದಲ್ಲಿ ಇದ್ದು ಈ ರೀತಿ ಒಬ್ಬ ಶಾಸಕರಿಗೆ ಉತ್ತರ ಕೊಡತಕ್ಕದ್ದು ಸೌಜನ್ಯ ಆಗುವುದಿಲ್ಲ ಎಂದು ಹೇಳಿದೆ. ಅದೂ ಅಲ್ಲದೆ ವಿಧವಾ ಮಹಿಳೆ ಬಗ್ಗೆ ಸಂಸಾರದ ಅನುಕಂಪದ ಮೇಲೆ ಮಾಹಿತಿ ತೆಗೆದುಕೊಂಡು ಶಾಸಕರು ಬಂದಂಥ ಸಂದರ್ಭದಲ್ಲಿ, ಯಾವ ರೀತಿ ವರ್ತನೆ ಮಾಡಬೇಕೆಂಬ ಪರಿಜ್ಞಾನವಿಲ್ಲದೆ ಅವರು ಬಹಳ ಕನಿಷ್ಟ ಸೌಜನ್ಯನಿಂದ ನಡೆದುಕೊಂಡದ್ದಾರೆ. ನಮಗೆ ದಕ್ಷತೆ ಎಂದರೆ ಯಾವುದು ಎಂಬ ಪ್ರಶ್ನೆ ಬರುತ್ತದೆ. ದಕ್ಷ ಅಧಿಕಾರಿಗಳನ್ನು ಗೌರವಿಸಬೇಕಾದುದು ನಮ್ಮ ಧರ್ಮ. ದಕ್ಷತೆ ಎಂದರೆ ಯಾರು ಅಶಕ್ತರಾಗಿದ್ದಾರೆ, ಯಾರು ದೌರ್ಬಲ್ಯಕ್ಕೆ ಒಳಗಾಗಿದ್ದಾರೆ, ಯಾರು ತಮ್ಮ ರಕ್ಷಣೆ ತಾವೇ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಅಂಥವರ ಬಗ್ಗೆ ರಕ್ಷಣೆ ಕೊಡುವುದಕ್ಕೆ, ದುರ್ಬಲರಿಗೆ ಮಾನವೀಯ ಸೌಲಭ್ಯ ಕೊಡಲಿಕ್ಕೆ, ಅವರು ಮಾನವೀಯತೆಯಿಂದ ಬಾಳುವುದಕ್ಕೆ ವ್ಯವಸ್ಥೆ ಮಾಡುವಂಥ ಶಾಸಕರಿಗೆ ಪೂರ್ಣ ಗಮನ ಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಬ್ಬ ಸರ್ಕಾರೀ ನೌಕರನ ಮರಣೋತ್ತರ ಸೌಲಭ್ಯಗಳು ಅವನ ಕುಟುಂಬಕ್ಕೆ ಏನು ಸಿಕ್ಕಬೇಕಾಗಿತ್ತೋ ಅವು ಸಿಕ್ಕಿರಲಿಲ್ಲ. ಅದನ್ನು ಶಾಸಕರಾದವರು ಕೇಳುವುದಕ್ಕೆ ಹೋದಾಗ ಇಂಥಹ [illegible] ಇದು ತಡವಾಗಿದೆ, ಇದನ್ನು ಸರಿಪಡಿಸಿ ಕಳುಹಿಸಿಕೊಡುತ್ತೇವೆಂದು ಹೇಳಬೇಕು. ಆದರೆ ನೀವು ನಮ್ಮ

ಕಛೇರಿಗೆ ಬರಬೇಡಿ ಎಂದು ಹೇಳುವಂಥ ಅವಶ್ಯಕತೆ ಇರಲಿಲ್ಲ. ಆರೀತಿ ಅವರು ಹೇಳಿರತಕ್ಕದ್ದು ಸರಿಯಲ್ಲ.

ಅಧ್ಯಕ್ಷರು : ಮಾನ್ಯ ಸದಸ್ಯರು ತಮ್ಮ ಅನುಭವವನ್ನು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಕೇವಲ ಅವರಿಗಾಗಿರುವ ಅನುಭವ ಮಾತ್ರ ಅಲ್ಲ. ಬಹುಶಃ ಈ ಸದನದಲ್ಲಿ ಅನೇಕ ಸದಸ್ಯರು ಈ ರೀತಿ ಉಸಿರುಕಟ್ಟುವಂಥ ವಾತಾವರಣದಲ್ಲಿ ಕೆಲಸ ಮಾಡುತ್ತಿದ್ದೇವೆ. ಸರ್ಕಾರದವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸರಿಯಾದ ರೀತಿಯಲ್ಲಿ ವರ್ತನೆ ಮಾಡುವಂತೆ ತಿಳಿಸಬೇಕು. ಅದು ಆಗದಿದ್ದರೆ ಶಾಸಕರಾಗಿ ನಾವು ನಮ್ಮ ಕೆಲಸವನ್ನು ಮಾಡುವುದು ಕಷ್ಟವಾಗಿ ಉಸಿರು ಕಟ್ಟುವಂಥ ಪರಿಸ್ಥಿತಿ ಈಗ ಏನುಬಂದಿದೆ ಇದಕ್ಕಾಗಿ ನಾವು ತಮ್ಮ ಮುಂದೆ ಪ್ರಸ್ತಾಪ ಮಾಡುತ್ತಿದ್ದೇವೆ. ಇಂಥಹ ಅನೇಕ ಅನುಭವಗಳು ಅನೇಕ ಜನ ಸದಸ್ಯರಿಗೆ ಅನೇಕ ಕಡೆಗಳಲ್ಲಿ ಆಗಿದೆ. ಆ ಪಕ್ಷ, ಈ ಪಕ್ಷ ಎಂದು ಅಲ್ಲ. ಸಂಬಂಧಪಟ್ಟವರನ್ನು ಕರೆದು ಹೇಳಬೇಕು.

ಅಧ್ಯಕ್ಷರು : ನಾನು ಸಂಬಂಧಪಟ್ಟವರನ್ನು ಕಂಡು ಮಾತನಾಡುತ್ತೇನೆ.

ಶ್ರೀ ಸಿ.ಹೆಚ್. ವಿಜಯಶಂಕರ್ : ಒಂದೇ ಒಂದು ಮಾತನ್ನು ಹೇಳಿಬಿಡುತ್ತೇನೆ. ನೀವು ಈ ರೀತಿ ವರ್ತನೆ ಮಾಡುವುದಾದರೆ ನಮಗೆ ನಮ್ಮದೇ ಆದಂಥ ಒಂದು ಘೋರಂ ಇದೆ, ಅಲ್ಲಿ ಇದನ್ನು ಪ್ರಶ್ನೆ ಮಾಡಬೇಕಾಗುತ್ತದೆಂದು ನಾನು ಹೇಳಿದಾದ ನೀವು ಎಲ್ಲಿಗೆ ಬೇಕಾದರೂ ಹೋಗಿ, ಏನು ಬೇಕಾದರೂ ಮಾಡಿಕೊಳ್ಳಿ, ನನಗೆ ನೀವು ಏನನ್ನೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುವಂಥ ಮಾತನ್ನು ಆ ಅಧಿಕಾರಿ ಹೇಳಿದ್ದಾರೆ. ಈ ರೀತಿ ಹೇಳುವುದಾದರೆ, ಇದಕ್ಕೆ ದಕ್ಷತೆ ಎಂದು ಹೇಳುವುದಕ್ಕಾಗುವುದಿಲ್ಲ, ಇದು ದುರಹಂಕಾರ, ನಿನ್ನೆ ನಾನು ಅವರನ್ನು ನೋಡಿದಾಗ ಅವರಿಗೆ ಬಹುಶಃ ಮನಸ್ಸಿಗೆ ಅಸ್ವಸ್ಥತೆ ಇದೆ ಎಂದು ಅನಿಸಿತು. ಅವರು ಇದೇರೀತಿ ಅನೇಕ ಹಿರಿಯ ಶಾಸಕರೊಂದಿಗೂ ಕೂಡ ಅಸೌಜನ್ಯವಾಗಿ ನಡೆದುಕೊಂಡಿದ್ದಾರೆಂದು ನನಗೆ ಆನಂತರ ಮಾಹಿತಿ ಸಿಕ್ಕಿತು. ಸರ್ಕಾರ ಇದರ ಬಗ್ಗೆ ಗಮನಹರಿಸಿ ಅವರು ನಮ್ಮ ಹಕ್ಕನ್ನು ಏನು ಚ್ಯುತಿ ಮಾಡಿದ್ದಾರೆ ಅದಕ್ಕೆ ಸೂಕ್ತ ಕ್ರಮವನ್ನು ಜರುರಿಸಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಈಗಾಗಲೇ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಾವು ಕನ್ನಡಕ್ಕೆ ಅಗ್ಯತೆಯನ್ನು ಕೊಟ್ಟಿದ್ದೇವೆ,....

ಅಧ್ಯಕ್ಷರು : ನೀವು ಎಲ್ಲಿಂದ ಎಲ್ಲಿಗೋ ಹೋಗುತ್ತಿದ್ದೀರಿ. ಹಕ್ಕುಚ್ಯುತಿ ವಿಚಾರದಿಂದ ಕನ್ನಡಕ್ಕೆ ಹೋಗುತ್ತಿದ್ದೀರಿ.

ಶ್ರೀ ಹೆಚ್.ಎನ್. ಶಂಕರಲಿಂಗೇಗೌಡ : ತನುಕನ್ನಡ, ಮನ ಕನ್ನಡ, ನುಡಿ ಕನ್ನಡ, ಎಂದು ಕರೆಯುತ್ತಾರೆಯೇ ಹೊರತು ಕಾರ್ಯತಃ ನಡೆದುಕೊಳ್ಳುತ್ತಿಲ್ಲ, ನಾವು ಹೆಣ್ಣುಮಕ್ಕಳಿಗೆ ಅದ್ಯತೆ ಕೊಟ್ಟಿದ್ದೇವೆ. ಈ ಅಧಿಕಾರಿಗಳು ಜನ ಪ್ರತಿನಿಧಿಗಳಿಗೆ ಸ್ಪಂದಿಸುವಂಥ ಕೆಲಸ ಮಾಡದಿದ್ದರೆ ಅದಕ್ಕೆ ಸೂಕ್ತ ಕ್ರಮವನ್ನು ನೀವು ಏನು ತೆಗೆದುಕೊಳ್ಳುತ್ತೀರಿ ಎಂಬುದನ್ನು ನಾನು ಕೇಳಬಯಸುತ್ತೇನೆ,

ಅಧ್ಯಕ್ಷರು : ನೀವು ಅಷ್ಟು ವೇಗವಾಗಿ ಹೇಳಿದರೆ ಇವರು ಬರೆದುಕೊಳ್ಳುವುದಾದರೂ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಶಾಸಕರು ಬಂದಾಗ ಅಧಿಕಾರಿಗಳ ವರ್ತನೆ ಹೇಗಿರಬೇಕೆಂಬ ಬಗ್ಗೆ ಬಹಳ ವರ್ಷಗಳಿಂದ ಸರ್ಕಾರದ ಒಂದು ಆದೇಶವಿದೆ. ಮೊದಲನೆಯದಾಗಿ ಶಾಸಕರು ಬಂದಕೂಡಲೇ ಅಧಿಕಾರಿಗಳು

ಎದ್ದು ನಿಂತು ಅವರನ್ನು ಕರೆದು ಅವರಿಗೆ ಕುರ್ಚಿ ಕೊಟ್ಟು ನೀವು ಕುಳಿತುಕೊಳ್ಳಿ ಎಂದು ಹೇಳಿ ನಂತರ ಅವರು ಬಂದಿರತಕ್ಕ ಕೆಲಸದ ಬಗ್ಗೆ ವಿಚಾರ ಮಾಡಿ ಆ ಕೆಲಸ ಆಗುತ್ತದೆಯೋ, ಇಲ್ಲವೋ ಅದಕ್ಕೆ ಏನು ಹೇಳುತ್ತಾರೋ ಹೇಳಲಿ. ಅದು ಅವರ ಕರ್ತವ್ಯ. ಆದರೆ ನಿನ್ನೆ ನಡೆದಿರತಕ್ಕದ್ದು, ಇದು ಒಂದು ಉದಾಹರಣೆ. ಇಡೀ ರಾಜ್ಯಾದ್ಯಂತ ಶಾಸಕರಿಗೆ ಆಗಿಂದಾಗ್ಗೆ ಆಗುತ್ತಿರುವಂಥ ಪರಿಸ್ಥಿತಿ. ಶ್ರೀ ಮಾರುತಿರಾವ್‌ರವರು ಹೋದಾಗ ಅಲ್ಲಿ ಏನು ನಡೆಯಿತು ಎಂಬುದನ್ನು ಅವರ ಭಾಷೆಯಲ್ಲಿ ನನಗೆ ಹೇಳಿದರು. ಬಹಳ ಕೆಟ್ಟ ಭಾಷೆಯಲ್ಲಿ ಆ ಅಧಿಕಾರಿ ಮಾತನಾಡಿದ್ದಾರೆ. ಸ್ವಲ್ಪ ಹೆಚ್ಚು ಕಡಿಮೆ ಆಗಿದ್ದಿದ್ದರೆ ಆ ಯಮನೇ ಬಂದು ಈ ಶಾಸಕರನ್ನು ಹೊರಗೆ ತಳ್ಳಿ ಹಾಕುತ್ತಿದ್ದರೋ ಏನೋ, ಅಷ್ಟು ಮಟ್ಟದ ಧಾಟಿಯಲ್ಲಿ ಮಾತನಾಡಿದ್ದಾರೆ. ನಮ್ಮಲ್ಲಿ ಅನೇಕ ಒಳ್ಳೆಯ ಅಧಿಕಾರಿಗಳಿದ್ದಾರೆ. ನಾವು ಅವರನ್ನು ಪ್ರಶಂಸೆ ಕೂಡ ಮಾಡಬೇಕಾಗುತ್ತದೆ. ಅನೇಕ ಮೆಚ್ಚುಗೆಯಾಗುವಂಥ ಅಧಿಕಾರಿಗಳು ನಮ್ಮಲ್ಲಿದ್ದಾರೆ. ಬಹಳ ಹಿರಿಯ ಐ.ಎ.ಎಸ್. ಅಧಿಕಾರಿಗಳೂ ಕೂಡ ಶಾಸಕರನ್ನು ಬಹಳ ಪ್ರೀತಿಯಿಂದ, ವಿಶ್ವಾಸದಿಂದ, ಕರೆದು ಮಾತನಾಡುವಂಥ ಸೌಜನ್ಯತೆ ಇದೆ. ಆದರೆ ಈ ಅಧೀನ ಕಾರ್ಯದರ್ಶಿ ಅನೇಕ ಜಿಲ್ಲೆಗಳಲ್ಲಿ ಕೆಲಸಮಾಡಿ ಇಲ್ಲಿಗೆ ಬಂದಿದ್ದಾರೆ.

ನಾನು ತಮ್ಮ ಮೂಲಕ ಸಲಹೆ ಮಾಡುವುದೆಂದರೆ, ಈ ವಿಚಾರವನ್ನು ತಾವು ನೇರವಾಗಿ ಹಕ್ಕುಚ್ಯುತಿ ಸಮಿತಿಗೆ ಕಳುಹಿಸಲೇಬೇಕು. ಏಕೆಂದರೆ ಇದು ಹಕ್ಕುಚ್ಯುತಿಯಾಗುತ್ತದೆ. ಹಕ್ಕುಚ್ಯುತಿ ಸಮಿತಿಗೆ ಇದನ್ನು ಕಳುಹಿಸಿ ಆ ಸಮಿತಿಯ ಮುಂದೆ ಈ ಅಧಿಕಾರಿಯನ್ನು ಕರೆಯಿಸಬೇಕು. ಇದನ್ನು ನೀವು ಮಾಡದಿದ್ದರೆ ಬೇರೆ ಎಲ್ಲಾ ಅಧಿಕಾರಿಗಳೂ ನಮ್ಮ ಮೇಲೆ ಬೀಳುವುದಕ್ಕೆ ಶುರು ಮಾಡುತ್ತಾರೆ. ಈ ಒಂದು ಪರಿಸ್ಥಿತಿ ಒಬ್ಬ ಅಧಿಕಾರಿಗಾದರೂ ಆಗಿದೆ, ಶಾಸಕರ ಜೊತೆ ನಾವು ಯಾವರೀತಿ ಇರಬೇಕು ಎಂಬುದು ಅವರಿಗೆ ಗೊತ್ತಾಗಬೇಕು. ನಮಗೆ ಅವರೇನೂ ವಿಶೇಷವಾದ ವ್ಯವಸ್ಥೆ ಮಾಡಿಕೊಡುವುದು ಬೇಡ. ನೀವು ಏನು ನಿರ್ದೇಶನವನ್ನು ಕೊಟ್ಟಿದ್ದೀರಿ? ನಿಮ್ಮ ಆದೇಶ ಏನಿದೆ, ಅದರ ಪ್ರಕಾರ ಅವರು ನಡೆದುಕೊಳ್ಳಬೇಕಾದುದು ಅಧಿಕಾರಿಗಳ ಕರ್ತವ್ಯ. ಆದ್ದರಿಂದ ನಾವು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇವೆ. ದಯವಿಟ್ಟು ಇದನ್ನು ತಳ್ಳಿಹಾಕಬೇಡಿ. ಆ ಅಧಿಕಾರಿ ಹಕ್ಕುಚ್ಯುತಿ ಸಮಿತಿಯ ಮುಂದೆ ಬರಲಿ. ಅಲ್ಲಿ ಅವರು ಏನೇನು ಹೇಳಿಕೊಳ್ಳುತ್ತಾರೋ ಹೇಳಿಕೊಳ್ಳಲಿ. ಇಲ್ಲದಿದ್ದರೆ ಬೇರೆ ಶಾಸಕರು ಎಲ್ಲಿ ಹೋದರೂ ಅವರಿಗೆ ಸರಿಯಾದ ಗೌರವ ಸಿಕ್ಕುವುದಿಲ್ಲ. ಹಿಂದೆ ಒಂದು ಸಾರಿ ಮಾನ್ಯ ಯಡಿಯೂರಪ್ಪನವರು ವಿಧ್ಯಾ ಇಲಾಖೆಗೆ ಹೋದಾಗ ಅವರ ಮೇಲೆ ಒಂದು ದೊಡ್ಡ ಗೂಬೆಯನ್ನೇ ಕೂಡಿಸಿದ್ದರು. ಅವರು ಬಂದರು, ಬಾಗಿಲನ್ನು ಒದ್ದರು, ಒಳಗೆ ನುಗ್ಗಿದರು ಎಂದು ಅನೇಕ ವಿಚಾರಗಳನ್ನು ಒಬ್ಬ ಅಧಿಕಾರಿಗಳು ಹೇಳಿದ್ದರು. ನಾನು ಹೇಳುವುದು ಏಕೆಂದರೆ, ಅಧಿಕಾರಿಗಳಿಗೆ ಇದು ಒಂದು ಎಚ್ಚರಿಕೆಯಾಗಿರಲಿ, ಶಾಸಕರ ರಕ್ಷಣೆಗೋಸ್ಕರ ಇದನ್ನು ಹಕ್ಕುಚ್ಯುತಿ ಸಮಿತಿಗೆ ಕಳುಹಿಸಿಕೊಡಬೇಕೆಂದು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಎಸ್ ಶಂಕರಲಿಂಗೇಗೌಡ : ಆದ್ಯತೆಯ ಮೇಲೆ ಇದನ್ನು ಹಕ್ಕುಚ್ಯುತಿ ಸಮಿತಿಗೆ ಕಳುಹಿಸಲೇಬೇಕು.

ಅಧ್ಯಕ್ಷರು : ಮಾನ್ಯ ಉಪ ಮುಖ್ಯ ಮಂತ್ರಿಗಳ ಗಮನಕ್ಕೆ, ಇಲ್ಲಿ ಹ್ಯಾಂಡ್ ಬುಕ್ ಫಾರ್ ಮೆಂಬರ್ಸ್ ಎಂದು ಇದೆ. ನಮ್ಮ ಕರ್ನಾಟಕ ಸರ್ಕಾರದಿಂದ 1975ರಲ್ಲಿ ಹೊರಡಿಸಿರುವಂಥ ಒಂದು ಸರ್ಕ್ಯುಲರ್ ಇದೆ. ಅದರಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.

The two basic principles to be borne in mind : The Government servant should show courtesy and consideration to the Member of Parliament and State Legislatures and that they should consider carefully or listen patiently what the Members of Parliament and State Legislatures may have to say. They should always act according to their own best judgement.

ಮತ್ತೆ ಸಬ್ಸಿಕ್ವೆಂಟ್ ಆಗಿ ಹೇಗೆ ಹೇಳಿದ್ದಾರೆ.

It should be the endeavour of every officer to help the Members of Parliament and the State Legislature to the extent possible in the discharge of their important functions under the Constitution. In case, however, where an officer is unable to accede to the request or suggestion of a Member, the reasons for this inability to do so should be courteously explained to the Member."

It will request the Leader of the Opposition and other Members to see that this is honoured. It is not a good precedent that we take up privilege motion against the officers, that we take their names for discussion. It is not in good taste.

SRI J.H. PATEL : The concerned officer will be warned.

ಕನ್ನಡದ ಬಗ್ಗೆ ಆ ಅಧಿಕಾರಿ ಅಗೌರವದಿಂದ ಮಾತನಾಡಿದ್ದರೆ ಅವರಿಗೆ ನಾವು ಎಚ್ಚರಿಕೆಯನ್ನು ಕೊಡಲೇಬೇಕಾಗುತ್ತದೆ. ಶಾಸಕರ ಬಗ್ಗೆ ಏನಿದೆ ಎಂಬುದನ್ನು ನಾನು ಓದಬೇಕೆಂದಿದ್ದೆ. ಆದರೆ ತಾವೇ ಅದನ್ನು ಓದಿದ್ದೀರಿ. ಆದ್ದರಿಂದ ಇದರ ಬಗ್ಗೆ ಪ್ರಿವಿಲೇಜ್ ಮೋಷನ್ ಏನೂ ಬೇಡ. ಸರ್ಕಾರ ಇದರ ತೀವ್ರತೆಯನ್ನು ಗಮನಿಸಿದೆ. ಆ ಅಧಿಕಾರಿಗೆ ಒಂದು ಸಾರಿ ಎಚ್ಚರಿಕೆಯನ್ನು ಕೊಡುತ್ತೇವೆ. ಅನಂತರ ಅವರಿಗೆ ಯಾವ ಶಿಕ್ಷೆಯನ್ನು ಕೊಡಬೇಕೋ ಕೊಡುತ್ತೇವೆ.

ಅಧ್ಯಕ್ಷರು : ನಂಜೇಗೌಡರೇ ತಾವು, ತಮ್ಮ ಶಾಸಕರಿಗೆ ಹೇಳಿ. ಇದನ್ನು ಒತ್ತಾಯ ಮಾಡುವುದು ಬೇಡ.

ಶ್ರೀ ಎಂ. ನಾರಾಯಣಸ್ವಾಮಿ : ಈಗ ಅವರು ಏನು ಪ್ರಿವಿಲೇಜ್ ಮೋಷನ್ ತಂದಿದ್ದಾರೆ ಅದರ ಬಗ್ಗೆ ಒಂದೇ ಒಂದು ಮಾತನ್ನು ಹೇಳುತ್ತೇನೆ. ಈ ಅಧಿಕಾರಿ ಎಲ್ಲೆಲ್ಲಿ ಸರ್ವೀಸ್ ಮಾಡಿದ್ದಾರೋ ಅಲ್ಲೆಲ್ಲಾ ಅದೇ ರೀತಿ ನಡೆದುಕೊಂಡಿದ್ದಾರೆ. ನಾವೂ ಕೂಡ ಅವರು ಜಿಲ್ಲಾ ಪರಿಷತ್ತಿನಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ನೋಡಿದ್ದೇವೆ. ಹಿಂದೆ ಅವರು ನಮ್ಮ ಜಿಲ್ಲಾ ಪರಿಷತ್ತಿನಲ್ಲಿ ಮುಖ್ಯ ಕಾರ್ಯದರ್ಶಿಯಾಗಿದ್ದರು. ಇವರು ಹೋದ ಪ್ರತಿಯೊಂದು ಜಾಗದಲ್ಲೂ ಕೂಡ ಶಾಸಕರ ಬಗ್ಗೆ ಇದೇ ರೀತಿ ನಡೆದುಕೊಂಡಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಮಾನ್ಯ ಅಧ್ಯಕ್ಷರೆ, ಈ ಅಧಿಕಾರಿ ಹಿಂದೆ ಕೋಲಾರದ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯಾಗಿದ್ದರು. ನನಗೆ ಸ್ವಂತ ಅನುಭವ ಕೂಡ ಆಗಿದೆ. ಅವರ ವರ್ತನೆ ಹೇಗಿತ್ತೆಂದರೆ, ಅವರು ನೇರವಾಗಿ ಹೇಳುತ್ತಾರೆ, ರಾಜಕಾರಣಿಗಳು ಎಂದರೆ ನನಗೆ ಸರಿಹೋಗುವುದಿಲ್ಲ, ನಾನು ಯಾರನ್ನೂ ಹತ್ತಿರ ಸೇರಿಸುವುದಿಲ್ಲ ಎಂದು ಹೇಳುತ್ತಾರೆ. ಅಲ್ಲೂ ಕೂಡ ಹಲವಾರು ರಾಜಕೀಯ ಮುಖಂಡರನ್ನು ನೀವು ನನ್ನ ಆಫೀಸಿಗೆ ಬರಬೇಡಿ ಎಂದು ಹೇಳಿರತಕ್ಕ ಉದಾಹರಣೆಗಳು ಬಹಳಷ್ಟು ಇವೆ. ಈಗ ನಾವು ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ.

ಒಟ್ಟಿನಲ್ಲಿ ಆ ಅಧಿಕಾರಿಯ ಮನಸ್ಸಿನಲ್ಲಿ ಆ ರೀತಿಯ ಮನೋಭಾವನೆ ಸ್ಪಷ್ಟವಾಗಿದೆ. ಆ ಅಧಿಕಾರಿಯ ಹೆಸರು ಮಂಜುಳ ಎಂದು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಹಿಳಾ ಅಧಿಕಾರಿಗಳಿಗೆ ಮಹಿಳೆಯರಿಗೆ ಇರತಕ್ಕಂಥ ಸೌಜನ್ಯತೆಯಾದರೂ ಇರಬೇಕೆಂದು ನಾನು ಹೇಳಬಯಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಇಂಥ ಒಂದು ಅನುಭವವನ್ನು ನಾನೇ ಅನುಭವಿಸಿದ್ದೇನೆ. ಹಿಂದೊಮ್ಮೆ ಯಾರೋ ಒಬ್ಬ ನಿವೃತ್ತ ನೌಕರನ ಪೆನ್‌ಷನ್ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ಎಜ್ಯುಕೇಷನ್ ಡಿಪಾರ್ಟ್‌ಮೆಂಟ್‌ಗೆ ಹೋಗಿದ್ದಾಗ ಅಲ್ಲಿ ನಡೆದಂತಹ ರಂಪ, ಇಲ್ಲಿ ನಡೆದಂಥ ಚರ್ಚೆಯನ್ನು ನೋಡಿದರೆ ಯಾವುದೇ ಶಾಸಕನಿಗೂ ಆ ಪರಿಸ್ಥಿತಿ ಬರಬಾರದು. ಇದು ಬೇಡ. ಈ ಕೇಸನ್ನು ಒಂದು ಸಾರಿ ಹಕ್ಕುಚ್ಯುತಿ ಸಮಿತಿಗೆ ರೆಫರ್ ಮಾಡುವುದರಿಂದ ಕೊನೇ ಪಕ್ಷ ಅಧಿಕಾರಿಗಳ ವರ್ತನೆಯಲ್ಲಿ ಸ್ವಲ್ಪ ಮಟ್ಟಿಗಾದರೂ ಬದಲಾವಣೆಯಾಗುತ್ತದೆ. ಆದರೆ ಎಲ್ಲಾ ಅಧಿಕಾರಿಗಳ ವರ್ತನೆಯೂ ಆ ರೀತಿ ಇಲ್ಲ. ನೂರಕ್ಕೆ ಹತ್ತು ಜನ ಇಂಥವರು ಇರಬಹುದು. ಆದ್ದರಿಂದ ದಯವಿಟ್ಟು ಇದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಿ. ಬಹುಶಃ ಇದು ಒಂದು ಸೂಕ್ತ ಮತ್ತು ಸಮಂಜಸ ಪ್ರಕರಣವೆಂದು ಅಂದುಕೊಂಡಿದ್ದೇನೆ.

ಶ್ರೀ ಎಂ. ನಾರಾಯಣಸ್ವಾಮಿ : ಇದನ್ನು ತಾವು ಮಾಡಬೇಕಾಗುತ್ತದೆ ಸ್ವಾಮಿ.

ಅಧ್ಯಕ್ಷರು : ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ಮತ್ತಿತರೆ ಎಲ್ಲಾ ಮಾನ್ಯ ಸದಸ್ಯರಲ್ಲೂ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಸದನದ ಗೌರವವನ್ನು ಕಾಪಾಡುವುದು, ಸದಸ್ಯರ ಹಕ್ಕುಗಳಿಗೆ ಚ್ಯುತಿ ಬಾರದಂತೆ ನೋಡಿಕೊಳ್ಳುವ ಹೊಣೆ ನನ್ನ ಮೇಲಿದೆ. ಇದೊಂದು ಸಾರಿ ಸರ್ಕಾರಕ್ಕೆ ಅವಕಾಶವನ್ನು ಕೊಡೋಣ. ಒಬ್ಬ ಸರ್ಕಾರೀ ಅಧಿಕಾರಿಯ ಮೇಲೆ ನಾವು ಹಕ್ಕುಚ್ಯುತಿ ನಿರ್ಣಯವನ್ನು ತಂದೆವು ಎನ್ನುವುದಕ್ಕೆ ಅವಕಾಶವನ್ನು ಕೊಡುವುದು ಬೇಡ. ಒಂದು ಸಾರಿ ಅವಕಾಶವನ್ನು ಕೊಟ್ಟು ನೋಡೋಣ. ನಮಗೆ ಇಂಥಹ ಸನ್ನಿವೇಶಗಳು ಬಹಳಷ್ಟು ಬರುತ್ತವೆ. ತಮ್ಮ ಅಭಿಪ್ರಾಯ, ಮತ್ತು ಮಾತಿನ ಹಿಂದಿರತಕ್ಕ ತೀವ್ರತೆ, ತಾವೂ ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ್ದೂ, ಮಾನ್ಯ ಸದಸ್ಯರೂ ಹೇಳಿದ್ದೂ ನನಗೆ ಅರ್ಥವಾಗಿದೆ. ಹೊಸದಾಗಿ ಆರಿಸಿಬಂದಿರತಕ್ಕ ಸದಸ್ಯರ ಬಗ್ಗೆ ಅಧಿಕಾರಿಗಳು ಈ ರೀತಿ ನಡೆದುಕೊಂಡಾಗ ಶಾಸಕರು ನಿರುತ್ಸಾಹಗೊಳ್ಳುತ್ತಾರೆ. ಅಲ್ಲದೆ ಸರ್ಕಾರ ಹಿಂದೆ ಹೊರಡಿಸಿರತಕ್ಕ ಸರ್ಕ್ಯುಲರ್‌ನಲ್ಲೂ ಕೂಡ ಬಹಳ ಸ್ಪಷ್ಟವಾಗಿದೆ. ಬಹುಶಃ 75ನೇ ಇಸವಿಯಲ್ಲಿ ಈ ಸರ್ಕ್ಯುಲರ್ ಮಾಡಿದ್ದು ಎಂದರೆ ದಿವಂಗತ ದೇಶರಾಜ ಅರಸ್‌ರವರು ಇದ್ದಾಗ ಹೋಗಿರತಕ್ಕದ್ದು. ಒಂದು ವೇಳೆ ಸದಸ್ಯರ ಕೋರಿಕೆಯನ್ನು ಈಡೇರಿಸುವುದಕ್ಕೆ ಸಾಧ್ಯತೆ ಇಲ್ಲದಿದ್ದರೆ ಅದನ್ನೂ ಕೂಡ ಸೌಜನ್ಯಪೂರಿತವಾಗಿ ಹೇಳಬೇಕೆಂಬುದನ್ನೂ ಕೂಡ ಇದರಲ್ಲಿ ತಿಳಿಸಿದೆ. ಆದ್ದರಿಂದ ಇವರಿಗೆ ಒಂದು ಅವಕಾಶವನ್ನು ಕೊಡೋಣ. ಸರ್ಕಾರದ ವತಿಯಿಂದ ಸಂಬಂಧಪಟ್ಟ ಅಧಿಕಾರಿಗಳು ಯಾರಿದ್ದಾರೆ ಅವರನ್ನು ಕರೆಯಿಸಿ ಸೂಕ್ತ ಬುದ್ಧಿವಾದವನ್ನು ಹೇಳಬೇಕು.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ಈ ಅಧಿಕಾರಿಯ ವಿರುದ್ಧ ಪ್ರಿವಿಲೇಜ್ ಮೋಷನ್ ಹಾಕಬೇಕೆಂದು ನಾನು ಹೇಳುತ್ತಿಲ್ಲ. ಇವರು ಐ.ಎ.ಎಸ್. ಅಧಿಕಾರಿಯಾಗಿದ್ದರೆ ಅವರನ್ನು ನಮ್ಮ ರಾಜ್ಯ ಬಿಟ್ಟು ಹೊರಗೆ ಕಳುಹಿಸಿ. ಅವರು ನಮ್ಮ ರಾಜ್ಯದಲ್ಲಿ ಸರ್ವೀಸ್‌ನಲ್ಲಿ ಇರಬೇಕೆಂದೇನೂ ಇಲ್ಲ. ನೀವು ಮಂತ್ರಿಗಳಿದ್ದೀರಿ. ಇವರ ಇಲಾಖೆಯ ಕಾರ್ಯದರ್ಶಿಗಳು ಇದ್ದಾರೆ. ಆ ಇಲಾಖೆಯ ಸಂಬಂಧಪಟ್ಟ ಕಾರ್ಯದರ್ಶಿಗಳನ್ನು ಕರೆಯಿಸಿ ಅಧಿಕಾರಿಗಳನ್ನು ವಹಿಸಿಕೊಂಡು ಮಾತನಾಡುತ್ತಾರೆ,

ಅವರು ಅಟ್ಟಕ್ಕೆ ಹೋಗುತ್ತಾರೆ. ಅವರನ್ನು ಹಿಡಿತದಲ್ಲಿಡಬೇಕೆಂದರೆ ನಮ್ಮಲ್ಲಿ ಒಂದು ಗಾದೆ ಇದೆ "ಮೇಸ್ಟರು ತಪ್ಪು ಮಾಡಿದರೆ ಹುಡುಗರು ಓಡಾಡಿಕೊಂಡು ತಪ್ಪು ಮಾಡುತ್ತಾರೆ" ಎಂದು ಸ್ವಲ್ಪ ಇದನ್ನು ಅರ್ಥ ಮಾಡಿಕೊಂಡು ವಾರ್ನ್ ಮಾಡಲಿ. ಇಲಾಖೆಯವರಿಗೆ ಕೊಟ್ಟರೆ ಬಿಗಿ ಬರುತ್ತದೆ. ಮನೆ ಯಜಮಾನ ಸರಿ ಇದ್ದಾಗ.....

ಶ್ರೀ ಬಸವರಾಜ ರಾಯರೆಡ್ಡಿ : ಸಂಬಂಧಪಟ್ಟ ಅಧಿಕಾರಿಗಳನ್ನು ಇವತ್ತೇ ಕರೆಯಿಸುತ್ತೇನೆ. ಅವರಿಗೆ ಬುದ್ಧಿ ಹೇಳುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಇಂತಹ ಐ.ಎ.ಎಸ್. ಆಫೀಸರ್ ನಮ್ಮ ಕರ್ನಾಟಕ ರಾಜ್ಯಕ್ಕೆ ಬೇಡ. ಕಾಶ್ಮೀರಕ್ಕೆ ಕಳುಹಿಸಿ. ಅಲ್ಲಿ ಕೆಲಸ ಮಾಡಲಿ.

ಶ್ರೀ ಬಸವರಾಜ ರಾಯರೆಡ್ಡಿ : ಅವರು ಸರಿಯಾಗಿ ವರ್ತನೆ ಮಾಡದಿದ್ದರೆ

ಅಧ್ಯಕ್ಷರು : ಸದಸ್ಯರು ಇದರ ಬಗ್ಗೆ ಒತ್ತಾಯ ಮಾಡುವುದು ಬೇಡ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಒಂದು ಮಾತನ್ನು ಹೇಳುವುದಕ್ಕೆ ಅವಕಾಶ ಕೊಡಿ. ಒಬ್ಬ ದಕ್ಷ ಅಧಿಕಾರಿ, ಮೈಸೂರು ಜಿಲ್ಲಾಧಿಕಾರಿಗಳನ್ನು ಅವ್ಯಾಚ್ಯ ಶಬ್ದಗಳಿಂದ ನಮ್ಮ ಮಂತ್ರಿಯೊಬ್ಬರು ಬಯ್ದಾಗ ಅವರಿಗೆ ನಾವು ರಕ್ಷಣೆ ಕೊಟ್ಟಿವು. ಅಧಿಕಾರಿಗಳಿಗೂ ರಕ್ಷಣೆ ಕೊಡುತ್ತೇವೆ. ಆ ರೀತಿಯ ರಕ್ಷಣೆ ಕೊಟ್ಟಿದ್ದರಿಂದ ನಮ್ಮಗಳ ಮೇಲೆ ಅವ್ಯಾಚ್ಯ ಶಬ್ದಗಳಿಂದ, ಬಸ್ಸುಗಳು ಮೇಲೆಲ್ಲಾ ಬರೆಸಿ ನಮ್ಮ ಮಾನ ಮರ್ಯಾದೆಯನ್ನು ಬೀದಿಗೆ ತಂದವರು ಇದೇ ಸಚಿವರ ಕಡೆಯವರು, ಜಯಕುಮಾರ್‌ರವರ ಕಡೆಯವರು. ಆದ್ದರಿಂದ ಒಳ್ಳೆಯ ಅಧಿಕಾರಿಗಳನ್ನು ಬೆನ್ನು ತಟ್ಟುತ್ತೇವೆ. ಬಿ.ಜೆ.ಪಿ.ಯಲ್ಲಿ ನೈತಿಕ ಮೌಲ್ಯ ಇದೆ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತೇನೆ ನಾನು.

ಶ್ರೀ ಬಸವರಾಜ ರಾಯರೆಡ್ಡಿ : ಇವತ್ತೇ ಕರೆಯಿಸಿ ಮಾತನಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಹೇಳಿದ್ದು ಜಯಕುಮಾರ್‌ಗೆ ನೀವು ಬಸವರಾಜ ರಾಯರೆಡ್ಡಿಯವರು, ನೀವು ಏಕೆ ಎದ್ದು ನಿಲ್ಲುತ್ತಿದ್ದೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ಕಳಕಳಿ ಇಷ್ಟೆ. ಪ್ರಿವಿಲೇಜ್ ಸಮಿತಿ ಮುಂದೆ ಅವರನ್ನು ಕರೆಸಬೇಕೆಂಬುದಲ್ಲ. ಇದಕ್ಕಿಂತ ಬಹಳ ಮುಖ್ಯವಾಗಿ ಈ ರೀತಿ ಆಗದಂತೆ ನಾವು ನೋಡಿಕೊಳ್ಳುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟು, ಸರ್ಕಾರ ಆ ಜವಾಬ್ದಾರಿಯನ್ನು ತೆಗೆದುಕೊಂಡರೆ ಸಾಕು, ಉಪ ಮುಖ್ಯಮಂತ್ರಿಗಳಾದ ಶ್ರೀ ಜಿ.ಪರಮೇಶ್ವರ್ ಪಟೇಲ್‌ರವರು ಹೇಳುತ್ತಿದ್ದಾರೆ. ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳುತ್ತೇನೆಂದು.

ಅಧ್ಯಕ್ಷರು : ಸನ್ಮಾನ್ಯ ಗೌರವಾನ್ವಿತ ಸದಸ್ಯರು ಕೊಟ್ಟಿರತಕ್ಕ ಸೂಚನೆಯ ಹಿಂದೆ ಇರತಕ್ಕ ನೋವು, ಗಾಂಭೀರ್ಯ, ತೀವ್ರತೆ ನನಗೆ ಅರ್ಥವಾಗಿದೆ. ನಿಮ್ಮ ಎಲ್ಲಾ ಭಾವನೆಗಳಿಗೆ ನಾನು ಸ್ಪಂದಿಸುವುದಕ್ಕೆ ಸಿದ್ಧನಿದ್ದೇನೆ. ದಯಮಾಡಿ ಇದನ್ನು ನೀವು ಒತ್ತಾಯ ಮಾಡುವುದು ಬೇಡ. ಮುಂದಿನ ಕಲಾಪಗಳಿಗೆ ನಾವು ಹೋಗೋಣ.

ಶ್ರೀ ಡಿ.ಟಿ. ಜಯಕುಮಾರ್ : ಒಂದು ಕಡೆ ಅಧಿಕಾರಿಗಳಿಗೆ ರಕ್ಷಣೆ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಇನ್ನೊಂದು ಕಡೆ ಅಧಿಕಾರಿಗಳಿಗೆ ಪನಿಷ್‌ಮೆಂಟ್ ಕೊಡಿ ಎಂದು ಹೇಳುತ್ತಾರೆ. ಏನು ಇವರ ಇಬ್ಬಂದಿ ನೀತಿ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮೈಸೂರು ಜಿಲ್ಲಾಧಿಕಾರಿಗಳನ್ನು ಇವರು ಅವ್ಯಾಚ್ಯ ಶಬ್ದಗಳಿಂದ ಬಯ್ದಿರುವ ಪಟ್ಟಿಯನ್ನು ಬಹಿರಂಗಪಡಿಸಿದರೆ ಇವರ ಬಣ್ಣ ಬಯಲಾಗುತ್ತದೆ.

ಅಧ್ಯಕ್ಷರು : ಏನ್ರಿ ಬೈರೇಗೌಡರೇ, ಏನು ಮಾಡಬೇಕು ಇದಕ್ಕೆ? ಏಕೆ ಇವರಿಗೆ.....

(ಗೊಂದಲ)

ಶ್ರೀ ಸಿ. ಬೈರೇಗೌಡ : ಮೈಸೂರಿಗೂ ಈ ಅಧಿಕಾರಿಗೂ ಸಂಬಂಧ ಇಲ್ಲ, ಸಂಬಂಧ ಇಲ್ಲದೆ ಇರತಕ್ಕ ವಿಚಾರಗಳನ್ನು ಇಲ್ಲಿ ಎತ್ತುವುದಕ್ಕೆ ಅವಕಾಶ ಕೊಡಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ : ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು : ದಯಮಾಡಿ ಮುಂದೆ ಹೋಗೋಣ. ಅವರೇನೂ ಇನ್ಸಿಸ್ಟ್ ಮಾಡುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲ, ನಾನು ಆ ವಿಷಯದಲ್ಲಿ ಮಾತನಾಡುತ್ತಿಲ್ಲ, ಇದೇ ಸದನದಲ್ಲಿ ಶ್ರೀಮಾನ್ ಯಡಿಯೂರಪ್ಪನವರು ತಂದಂತಹ ನಿಲುವಳಿ ಸೂಚನೆ ಮೇಲೆ ಮಾತನಾಡುವಾಗ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಜುಲೈ 1975ರಲ್ಲಿ ಕೇಂದ್ರ ಸರ್ಕಾರದಿಂದ ಏನೊಂದು ಸುತ್ತೋಲೆ ಬಂದಿತ್ತು, ಮತ್ತು ಅದು ಆದಮೇಲೆ ಹಿಂದೆ ಶ್ರೀಮಾನ್ ದೇವರಾಜ ಅರಸುರವರು 1975ರಲ್ಲಿ ಇನ್ನೊಂದು ಸುತ್ತೋಲೆಯನ್ನು ಕಳುಹಿಸಿ, ಎಲ್ಲಾ ಅಧಿಕಾರಿಗಳಿಗೂ, ಯಾವ ರೀತಿ ವರ್ತನೆ ಮಾಡಬೇಕು ಎನ್ನತಕ್ಕಂತಹ ಬಗ್ಗೆ ಒಂದು ಕೋಡ್ ಆಫ್ ಕಾಂಡಕ್ಟ್, ಟೈಪ್ ಮಾಡಿದ ಸುತ್ತೋಲೆಯನ್ನು ಕಳುಹಿಸಿದ್ದರು. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು ಅದರೆ ಅದನ್ನು ತಕ್ಷಣ ಜಾರಿಯಲ್ಲಿ ತರುತ್ತೇನೆ, ಮತ್ತು ಎಲ್ಲಾ ಕಡೆ ಅದನ್ನು ಸರ್ಕ್ಯುಲೇಟ್ ಮಾಡುತ್ತೇನೆ ಅನ್ನತಕ್ಕ ಮಾತನ್ನು ಹೇಳಿ ಇವತ್ತಿಗೆ ಸುಮಾರು 8-10 ದಿವಸವಾಯಿತು. ತಮ್ಮ ಛೇಂಬರ್‌ನಲ್ಲೇ ಮಾತನಾಡುವಾಗ ಒಪ್ಪಿಕೊಂಡರು. ಇಲ್ಲಿಯವರೆಗೆ ಅದು ಹೋಗಿಲ್ಲ ಅಂದರೆ ಆ ಮಾತು ನಡೆದ ಮೇಲೆ ಈ ಘಟನೆ ನಡೆದಿರುವುದು. ನಾವು ಚರ್ಚೆ ಮಾಡಿದ ಮೇಲೆ ಮತ್ತು ಸುತ್ತೋಲೆಯನ್ನು ಹೊರಡಿಸುತ್ತೇವೆಂದು ಹೇಳಿದ ಮೇಲೆ ನಾನು ಎಲ್ಲರನ್ನೂ ವಾರ್ನ್ ಮಾಡುತ್ತೇನೆ ಅಧಿಕಾರಿಗಳನ್ನು, ಯಾರು ಮಾಹಿತಿ ಕೊಡುವುದಿಲ್ಲ, ಯಾವ ರೀತಿ ಲೆಜಿಸ್ಲೇಟರ್ಸ್ ಜೊತೆ ನಡೆದುಕೊಳ್ಳಬೇಕೆಂದು ಎನ್ನುವುದರ ಬಗ್ಗೆ ಹೇಳುತ್ತೇನೆ ಎಂದು ಅಂದ ಮೇಲೆ ಇನ್ನೂ ಆ ಸುತ್ತೋಲೆ ಹೋಗಿಲ್ಲ ಅಂದರೆ, ಬಹುಶಃ ನಮ್ಮ ಮಾತಿಗೆ, ನಿಮ್ಮ ಮಾತಿಗೆ ಯಾವ ಬೆಲೆ ಇಲ್ಲ ಎನ್ನತಕ್ಕ ಅರ್ಥ ಬರುತ್ತದೆ. ಇಲ್ಲ ಅಂದರೆ ಅದನ್ನು ಸದನದ ಟೇಬಲ್ ಮೇಲೆ ಇಟ್ಟುಬಿಡಿ ಎಂದು ಕಳುಹಿಸಿದ್ದೀರಿ. ಯಾವ ಡೇಟಿಗೆ ಇಷ್ಯೂ ಮಾಡಿದ್ದೀರಿ. ಅದು ಮಾಡಿದ್ದರೆ ಈ ಪ್ರಶ್ನೆ ಉದ್ಭವವಾಗುತ್ತಿರಲಿಲ್ಲ, ನೀವು ಒಂದು ವೇಳೆ ಇನ್‌ಸ್ಟ್ರಕ್ಷನ್ ಕೊಟ್ಟಿದ್ದರೆ .....

ಶ್ರೀ ಜೆ.ಹೆಚ್. ಪಟೇಲ್ : ವಿತ್‌ಡ್ರಾ ಆಗಿದ್ದುದು ಯಾವಾಗ?

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ : ವಿತ್‌ಡ್ರಾ ಅಲ್ಲ....

ಶ್ರೀ ಜೆ.ಹೆಚ್. ಪಟೇಲ್ : ಕೇಂದ್ರ ಸರ್ಕಾರದ ಸುತ್ತೋಲೆ ಏನು ಇದೆ, ಅದು ಇದೇ ತರಹದ್ದು, ಶಾಸಕರಿಗೆ ಹಾಗೂ ಲೋಕ ಸಭಾ ಸದಸ್ಯರಿಗೆ ಜೊತೆ ಯಾವ ರೀತಿ ವರ್ತನೆ ಮಾಡಬೇಕು, ಯಾವುದೇ ಅಧಿಕಾರಿ, ಶಾಸಕರು ಇರಲಿ, ಎಂ.ಪಿ. ಇರಲಿ, ಹೇಗೆ ವರ್ತನೆ ಮಾಡಬೇಕು ಎಂದು ಇದೆ. ಆ ರೀತಿ ಕೇಂದ್ರ ಸರ್ಕಾರ ಹೊರಡಿಸಿರತಕ್ಕ ಸುತ್ತೋಲೆ ಜಾರಿಯಲ್ಲಿದೆ. ರಾಜ್ಯ ಸರ್ಕಾರದ್ದು ಅವತ್ತು ತಮ್ಮ ಕೊಠಡಿಯಲ್ಲೇ ಒಪ್ಪಿದ್ದೇವೆ. ಇಷ್ಯೂ ಆಗಿದುದ್ದು 75ರಲ್ಲಿ ವಿತ್‌ಡ್ರಾ ಆಗಿದ್ದು ಯಾವಾಗ?

ಶ್ರೀ ಬಿ.ಬಿ. ಶಿವಪ್ಪ : ವಿತ್‌ಡ್ರಾ ಎನ್ನುವುದರಲ್ಲಿ ಸರ್ಕಾರದಲ್ಲಿ ಎರಡು ತರಹ ಇದೆ. ಒಂದು ಅಧಿಕೃತವಾಗಿ ಬರವಣಿಗೆ ಮೂಲಕ ವಿತ್‌ಡ್ರಾ ಮಾಡುವುದು, ಮತ್ತೊಂದು ಅನಧಿಕೃತವಾಗಿ ಹಾಗೆಯೇ ಗುಟ್ಟಿನಲ್ಲೇ ಹೇಳಿ ವಿತ್‌ಡ್ರಾ ಮಾಡುವುದು. ಹೀಗೆ ಎರಡು ವಿಧಾನಗಳು ಇವೆ. ಈಗ ನಡೆದದ್ದು ಅದೇ ರೀತಿ. 2 ದಿವಸ ಗಂಟೆಗಟ್ಟಲೆ ಚರ್ಚೆಯಾಗಿದೆ. ಅದೇ ವಿಚಾರ. ಶಾಸಕರಿಗೆ ಅಧಿಕಾರವನ್ನು ಮೊಟಕುಗೊಳಿಸಿದ್ದೀರಿ ಎಂದು ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಸನ್ಮಾನ್ಯ ಅಧ್ಯಕ್ಷರು ತಮ್ಮ ಕೊಠಡಿಯಲ್ಲಿ ಕುಳಿತುಕೊಂಡು, ಚರ್ಚೆ ಮಾಡಿ ತೀರ್ಮಾನ ಮಾಡಿದ್ದಾಗಿದೆ. ಮುಖ್ಯ ಹಿಂದೆ ಹೊರಡಿಸಿರತಕ್ಕಂತಹ ಸುತ್ತೋಲೆಗಳು ಏನು ಇದೆ, ಅವುಗಳನ್ನು ಜಾರಿಗೆ ತರುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್ : ತತ್‌ಕ್ಷಣ ಜಾರಿಗೆ ಕೊಡುತ್ತೇವೆ. ಅದರ ಬಗ್ಗೆ ಅಲ್ಲ ಹೇಳಿದ್ದುದು.

ಶ್ರೀ ಬಿ.ಬಿ. ಶಿವಪ್ಪ : 10 ದಿವಸವಾಯಿತು ಇದುವರೆವಿಗೂ ಇಷ್ಯೂ ಮಾಡಲಿಲ್ಲ. ಏಕೆಂದರೆ ವ್ಯವಹಾರ ಆ ರೀತಿ ನಡೆಯುತ್ತಿದೆ.

ಶ್ರೀ ಜೆ.ಹೆಚ್. ಪಟೇಲ್ : ಇವತ್ತೇ ಸುತ್ತೋಲೆಯನ್ನು ಇಷ್ಯೂ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ತತ್‌ಕ್ಷಣ ಜಾರಿಗೆ ತರುತ್ತೇವೆಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದರು....

ಶ್ರೀ ಜೆ.ಹೆಚ್. ಪಟೇಲ್ : ನಾನು ಹೇಳುತ್ತಿರುವ ಪ್ರಶ್ನೆ ಅದಲ್ಲ. ಈ ರೀತಿ ಅಧಿಕಾರಿಗಳು ಮತ್ತು ಶಾಸಕರ ಸಂಬಂಧ ಈ ರೀತಿ ಯಾವಾಗಿನಿಂದ ಶುರುವಾಯಿತು? ನಮ್ಮ ಕಾಲದಲ್ಲಿ ಅಂತೂ ಇರಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದನ್ನು ವಿತ್‌ಡ್ರಾ ಮಾಡಿದ್ದಾರೆ, ಇನ್ನೊಂದು ಸುತ್ತೋಲೆಯನ್ನು ಇಷ್ಯೂ ಮಾಡಿದ್ದಾರೆ ಎಂದು ಹೇಳುತ್ತಿಲ್ಲ. ಆ ರೀತಿಯ ಸುತ್ತೋಲೆ ಇದ್ದರೂ ಕೂಡ ಸರಿಯಾದ ರೀತಿಯಲ್ಲಿ ಆಚರಣೆಯಲ್ಲಿ ಬರುತ್ತಿಲ್ಲ. ಇಂಪ್ಲಿಮೆಂಟ್ ಆಗುತ್ತಿಲ್ಲ. ಅದಕ್ಕೆ ಪುನಃ ಅದೇ ಸುತ್ತೋಲೆಯನ್ನು ಒತ್ತಿ ಹೇಳುತ್ತೇನೆ ಎನ್ನತಕ್ಕ ಮಾತನ್ನು ಈ ಸದನದಲ್ಲಿ ಹೇಳಿದರು. ಒಂದು ವೇಳೆ ಈ ಸುತ್ತೋಲೆ ಎಗ್ಸಿಸ್ಟೆಂನ್ಸ್‌ನಲ್ಲಿದೆ ಎಂದು ತಿಳಿದುಕೊಳ್ಳೋಣ. ಇದೆ ಇದ್ದರೂ ಕೂಡ ನಿಮ್ಮ ಅಧಿಕಾರಿಗಳು ಮಯಲೇಟ್ ಮಾಡುತ್ತಿದ್ದಾರೆಂಬುದು ಈ ನಿರ್ದೇಶನದಿಂದ ಗೊತ್ತಾಗುತ್ತಿದೆ. ಅಂದಾಗ ಅಂತಹವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಜೆ.ಹೆಚ್. ಪಟೇಲ್ : ಅಂತಹ ಅಧಿಕಾರಿಗಳಿಗೆ ಎಚ್ಚರಿಕೆ ಕೊಡುತ್ತೇವೆ ಒಂದು ಸಾರಿ. ಅದೇ ತರಹ ವರ್ತನೆ ಮಾಡಿದರೆ ಅವರ ಮೇಲೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳಬೇಕಾಗುತ್ತದೆ. ಮತ್ತೊಂದು ಅಧಿಕಾರಿಗಳ ಪರ ಅಥವಾ ವಿರೋಧ ಎಂದು ಅಲ್ಲ. ನಾವೆಲ್ಲಾ ಒಂದೇ ನಾವು ಇದರೊಳಗೆ ಯಾರೂ ಹೆಚ್ಚು ಇಲ್ಲ ಕಡಿಮೆನೂ ಇಲ್ಲ. ನಾವು ಸಹ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಧಿಕಾರಿಗಳನ್ನು ನಾವೂ ಇಲ್‌ಟ್ರೀಟ್ ಮಾಡಬಾರದು. ಅಧಿಕಾರಿಗಳೂ ನಮ್ಮನ್ನು ಇಲ್‌ಟ್ರೀಟ್ ಮಾಡಬಾರದು. ಎರಡೂ ಕಡೆಯಿಂದ ಇದು ಆಗಬೇಕು. ನಮ್ಮಲ್ಲಿ ಕೆಲವರು ಬಹುಶಃ ಗೊತ್ತಿಲ್ಲದೆ ಬಹಳ ವಿಚಿತ್ರವಾಗಿ ವರ್ತನೆ ಮಾಡಿಬಿಟ್ಟರೆ, ನಾವು ಒಂದೊಂದು ಸಾರಿ ಅವರನ್ನು ಕೇಳುತ್ತೇವೆ ಏಕೆ ಈ ರೀತಿ ವರ್ತನೆ ಮಾಡುತ್ತೀರಿ ಎಂದು. ಅವರು ಡಿ.ಸಿ. ಇರಬಹುದು ಅಥವಾ ತಹಸೀಲ್ದಾರ್ ಇರಬಹುದು.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ನಿಮ್ಮವರೇ ಮಾಡಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್ : ಯಾರೇ ಇರಲಿ. ಇದರಲ್ಲಿ ನಿಮ್ಮವರು, ನಮ್ಮವರು ಎಂದು ಅಲ್ಲ. ಶಾಸಕರು ಮತ್ತು ಅಧಾಕಾರಿಗಳು, ಗೌರವವನ್ನು ಪರಸ್ಪರ ಕೊಟ್ಟು ತೆಗೆದುಕೊಳ್ಳುವುದು. ಆ ತರಹ ಅಧಿಕಾರಿಗಳು ಏನಾದರೂ ಮಿಸ್ ಬಿಹೇವ್ ಮಾಡಿದರೆ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಸನ್ಮಾನ್ಯ ಶಾಸಕರು ನಿಯಮ 19 ಅಡಿಯಲ್ಲಿ ಕೊಟ್ಟಿದ್ದ ಒಂದೋಂದು ಸೂಚನೆಯನ್ನು ಹಿಂದಕ್ಕೆ ಪಡೆದುಕೊಂಡಿರುವುದರಿಂದ ಈ ವಿಷಯವನ್ನು ಇಲ್ಲಿಗೇ ಮುಕ್ತಾಯಮಾಡಿ ಮುಂದಿನ ವಿಷಯಕ್ಕೆ ಹೋಗೋಣ..

ಗಮನ ಸೆಳೆಯುವ ಸೂಚನೆಗಳು

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ (ಬಾಗೇಪಲ್ಲಿ) : ಬಾಂಬೆ ಚಲನಚಿತ್ರದ ಪ್ರದರ್ಶನವನ್ನು ರಾಜ್ಯದ ಕೆಲವು ಜಿಲ್ಲೆಗಳಲ್ಲಿ ನಿಷೇಧ ಮಾಡಿರುವ ಬಗ್ಗೆ ಗೃಹ ಮಂತ್ರಿಗಳ ಗಮನ ಸೆಳೆಯುತ್ತೇನೆ

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) : "ಬಾಂಬೆ" ಚಲನಚಿತ್ರವು ಈ ರಾಜ್ಯದ ಕೆಲವು ಚಿತ್ರಮಂದಿರಗಳಲ್ಲಿ ಪ್ರದರ್ಶನಲಾಗುತ್ತಿದೆ. ಈ ಚಲನಚಿತ್ರದಲ್ಲಿ ಕೆಲವು ಸನ್ನಿವೇಶಗಳಲ್ಲಿ ಮತೀಯ ಗಲಭೆಗಳನ್ನು ಪ್ರಚೋದಿಸುವ ಅಂಶಗಳೊನ್ನೊಳಗೊಂಡಿದೆ ಎಂದು ಸರ್ಕಾರಕ್ಕೆ ದೂರುಗಳು ಬಂದಿದ್ದವು. ಕೆಲವು ಜಿಲ್ಲಾಧಿಕಾರಿಗಳು ಇದರ ಬಗ್ಗೆ ಸರ್ಕಾರದಿಂದ ಆದೇಶವನ್ನು ಕೇಳಿದ್ದರು. ಈ ಚಲನಚಿತ್ರವನ್ನು ನಾನೇ ಸ್ವತಃ ಇತರ ಅಧಿಕಾರಿಗಳೊಂದಿಗೆ ವೀಕ್ಷಿಸಿದ್ದೇನೆ. ಈ ಚಿತ್ರವನ್ನು ಮೂಲತಃ ತಮಿಳು ಭಾಷೆಯಲ್ಲಿ ತಯಾರಿಸಿದ್ದು, ಅದನ್ನು ಹಿಂದಿ ಮತ್ತು ತೆಲುಗು ಭಾಷೆಗಳಿಗೆ ಡಬ್ ಮಾಡಲಾಗಿದೆ. ಚಲನಚಿತ್ರದ ಕಥೆ ಮತ್ತು ಉದ್ದೇಶಗಳು ಪ್ರಶಂಸನೀಯ ಆಗಿವೆ. ಆದರೆ ಚಿತ್ರದಲ್ಲಿರುವ ಕೆಲವು ಸನ್ನಿವೇಶಗಳನ್ನು ಕಿಡಿಗೇಡಿಗಳು ದುರುಪಯೋಗಪಡಿಸಿಕೊಂಡು ಗಲಭೆಗಳಿಗೆ ಅಸ್ಪದ ಕೊಡಬಹುದಂತಾಗಿದೆ.

ಸಾರ್ವಜನಿಕರಿಂದ ಈ ಕೋರಿಕೆ ಬರುವ ಮೊದಲೆ ಬೆಂಗಳೂರು ನಗರದಲ್ಲಿ ಈಗಾಗಲೇ ಪ್ರದರ್ಶನವಾಗುತ್ತಿದ್ದು ಮತ್ತು ಯಾವುದೇ ಗಲಭೆಗಳು ಆಗಲಿಲ್ಲ. ಇತರ ಜಿಲ್ಲೆಗಳಲ್ಲಿ ಇನ್ನೂ ಮೂರನೆ ಹಂತದ ಚುನಾವಣೆಯಾಗಬೇಕಾಗಿದ್ದುದರಿಂದ (ಜಿಲ್ಲಾ ಪಂಚಾಯತ್ ಮತ್ತು ಗ್ರಾಮ ಪಂಚಾಯತ್) ಸಂಬಂಧಪಟ್ಟ ಜಿಲ್ಲಾ ದಂಡಾಧಿಕಾರಿಗಳಿಗೆ ಈ ಚಿತ್ರವನ್ನು ಅವರೆ ಸ್ವತಃ ವೀಕ್ಷಿಸಿ ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಪ್ರಚೋದನಾತ್ಮಕ ಸನ್ನಿವೇಶಗಳನ್ನು ತೆಗೆದುಹಾಕಬೇಕೆಂದು ಆದೇಶ ನೀಡಲಾಗಿದೆ. ಅದರ ಪ್ರಕಾರ ಜಿಲ್ಲಾ ದಂಡಾಧಿಕಾರಿಗಳು, ನಗರ ಆಯುಕ್ತರು, ರಾಯಚೂರು, ಹುಬ್ಬಳ್ಳಿ, ಧಾರವಾಡ ಮತ್ತು ಬೆಳಗಾಂ ನಗರಗಳಲ್ಲಿ ಸದ್ಯಕ್ಕೆ ನಿಷೇಧಿಸಿರುತ್ತಾರೆ. ಇತರ ನಗರಗಳಲ್ಲಿ ಈ ಚಿತ್ರವು ಪ್ರದರ್ಶನವಾಗುತ್ತಿದೆ. ಈ ಬಗ್ಗೆ ಸ್ಥಳೀಯ ಪೊಲೀಸರು ಮುಂಜಾಗ್ರತೆ ಕ್ರಮಗಳನ್ನೂ ಈಗಾಗಲೇ ಕೈಗೊಂಡಿದ್ದಾರೆ. ಯಾವುದೇ ಅರಿಹತಕರ ಘಟನೆ ಅಥವಾ ಗಲಭೆ ನಡೆದಿರುವುದಿಲ್ಲ. ಪರಿಸ್ಥಿತಿಯನ್ನು ನೋಡಿಕೊಂಡು ನಿಷೇಧಿಸುವ ಅಧಿಕಾರ ಆಯಾಯ ಜಿಲ್ಲಾಧಿಕಾರಿಗಳಿಗೆ ಇರುತ್ತದೆ, ಎಂಬುದನ್ನು ತಿಳಿಸಬಯಸುತ್ತೇನೆ.

11.40 ಎ.ಎಂ

+ ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೊಟ್ಟಿರತಕ್ಕ ಉತ್ತರದಲ್ಲಿ ನಾನು ಚಿತ್ರವನ್ನು ನೋಡಿದ್ದೇನೆ, ಅದರಲ್ಲಿ ಕೆಲವು ಪ್ರಶಂಸನೀಯವಾದ ಅಂಶಗಳಿವೆಯೆಂದು ಹೇಳಿದ್ದಾರೆ. ಅವರು ಚಿತ್ರವನ್ನು ನೋಡಿದರೆ ಯಾವಾಗ ನೋಡಿದರು? ಅದರಲ್ಲಿ ಪ್ರಶಂಸನೀಯವಾದ ಅಂಶಗಳು ಯಾವುವು?